ಸಿಸಿ. ನಂಬರಃ 357/2015
ಪಿ. ಡಬ್ಲ್ಯೂಃ 1

ದಿಃ 26-12-2024ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟಿ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಸ್.ಆರ್.ಎನ್ ಇವರಿಂದಃ

ಚಾಸಾ ಎಂದರೆ ಏನು ಅರ್ಥ ಎಂದು ಗೊತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಘಟನೆಯಾಯಿತು ಎಂದು ಹೇಳುವ ದಿನದಂದು 3 ಗಂಟೆಗೆ ನೀವು ನ್ಯಾಯಾಧೀಶರ ಮುಂದೆ ದೂರನ್ನು ಕೊಟ್ಟಿದ್ದರ ಬಗ್ಗೆ ಏನಾದರೂ ದಾಖಲೆ ಇದೆಯಾ ಎಂದರೆ ಸಾಕ್ಷಿಯು ನಿಪಿ-1 ಇದೇ ದಾಖಲಾತಿ ಆಗಿರುತ್ತದೆ ಎಂದು ನುಡಿಯುತ್ತಾರೆ. ನಿಪಿ-1 ರಲ್ಲಿ ನ್ಯಾಯಾಧೀಶರು ಆ ದಿನ ದೂರನ್ನು ಸಂಜೆ 5.20 ಗಂಟೆಗೆ ಸ್ವೀಕರಿಸಲಾಗಿದೆ ಎಂದು ನಮೂದು ಇದ್ದು, ನೀವು ಫಿರ್ಯಾದಿಯಲ್ಲಿ ಹೇಳಿದ್ದು ಸತ್ಯವೊ ಅಥವಾ ನಿಪಿ-1 ರಲ್ಲಿ ನಮೂದು ಮಾಡಿದ ಹಿಂಬರಹ ಸತ್ಯವೊ ಎಂದರೆ ಸಾಕ್ಷಿಯು ಸಮಯ ಏನು ನಮೂದು ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನ್ಯಾಯಾಧೀಶರ ಮುಂದೆ ದೂರನ್ನು ಕೊಟ್ಟರೆ ಅದನ್ನು ಯಾರು ಹಾಗೂ ಯಾವ ಸಮಯಕ್ಕೆ ಕೊಟ್ಟಿರುತ್ತಾರೆ ಎಂದು ನಮೂದು ಮಾಡುತ್ತಾರೆ ಎಂದರೆ ಸರಿ. ಸದರಿ

ದಾಖಲಾತಿಯನ್ನು ನೀವು ನ್ಯಾಯಾಲಯದ ಸಿಬ್ಬಂದಿಗಳು, ವಕೀಲರು ಹೋದ ನಂತರ ನ್ಯಾಯಾಲಯದ ಅವಧಿ ಮುಕ್ತಾಯವಾಗುವ ಹಂತದಲ್ಲಿ ಬಂದು ದುರುದ್ದೇಶದಿಂದ ಸೃಷ್ಟಿ ಮಾಡಿಕೊಂಡು ಹಾಜರುಪಡಿಸಿರುತ್ತೀರಿ ಎಂದರೆ ಸರಿಯಲ್ಲ. ವಕೀಲರು ಇದ್ದಾಗ ಕೊಟ್ಟಿದ್ದರೆ ನೀವು ಸೃಷ್ಟಿ ಮಾಡಿಕೊಂಡು ಹಾಜರುಪಡಿಸಿದ ದಾಖಲಾತಿ ಎಂದು ಗೊತ್ತಾಗುತ್ತದೆ ಎಂದು ನಂತರ ತಡವಾಗಿ ಕೊಟ್ಟಿರುತ್ತೀರಿ ಎಂದರೆ ಸರಿಯಲ್ಲ. ನಿಮಗೆ ಸಾಕಷ್ಟು ವಕೀಲರು ಪರಿಚಯ ಮತ್ತು ನಿಮ್ಮ ಅಭಿಮಾನ ಇರುವವರು ಹಾಗೂ ನಿಮಗೆ ಗೊತ್ತಿರುವವರು ಸಾಕಷ್ಟು ವಕೀಲರು ಇರುತ್ತಾರೆ ಎಂದರೆ ಸರಿ. ಘಟನೆಯಾಯಿತು ಎನ್ನುವ ಸಮಯದಲ್ಲಿ ಯಾರಾದರೂ ವಕೀಲರ ಜೊತೆಗೆ ಚರ್ಚೆಯನ್ನು ಏನಾದರೂ ಮಾಡಲು ತೊಂದರೆ ಇತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನೀವು ಶಿರಸ್ತೇದಾರರು ಇವರಿಂದ ಪೇಪರನ್ನು ಪಡೆದುಕೊಂಡಿರುತ್ತೀರಿ ಎಂದು ಕಳೆದ ಬಾರಿಗೆ ಹೇಳಿದ್ದು, ಶಿರಸ್ತೇದಾರರ ಹೆಸರು ಹೇಳಲು ಬರುತ್ತಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಅದನ್ನು ದೂರಿನಲ್ಲಿ ಅಥವಾ ಪೊಲೀಸರ ಮುಂದೆ ಹೇಳಿಕೆಯಲ್ಲಿ ತೋರಿಸಲು ಏನಾದರೂ ತೊಂದರೆ ಇತ್ತಾ ಎಂದರೆ ಸಾಕ್ಷಿಯು ಅದರ ಅವಶ್ಯಕತೆ ಕಂಡುಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ಹಾರವಾಡದ ಕಟ್ಟಿಗೆ ಉದ್ಯಮಿ ಶ್ರೀಕಾಂತ ನಾಯಕ ನಿಮ್ಮ ಸಂಬಂಧಿಕರು ಎಂದರೆ ಸರಿ. ಸಂದೇಶ ಮಂಗೇಶ ನಾಯ್ಕ (ಚಾಸಾ-3) ಇವರು ಶ್ರೀಕಾಂತ ನಾಯಕ ಇವರ ಹೆಂಡತಿಯ ತಮ್ಮನ ಮಗ ಎಂದರೆ ಸರಿ. ನಿಮ್ಮ ತಂದೆಯವರು ಅಂಕೋಲಾದಲ್ಲಿ ಅಬಕಾರಿ ಗುತ್ತಿಗೆದಾರರ ಹತ್ತಿರ ಕೆಲಸ ಮಾಡುತ್ತಿದ್ದರು

ಎಂದರೆ ಸರಿ. ಆರೋಪಿಯೂ ಸಹ ಇವರೂ ಸಹ ಅಬಕಾರಿ ಗುತ್ತಿಗೆದಾರರು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆ ಸಂದರ್ಭದಲ್ಲಿ ಅವರು ಆ ಕೆಲಸ ಮಾಡುತ್ತಿರಲಿಲ್ಲ ಎಂದು ನುಡಿಯುತ್ತಾರೆ. ಆ ಸಂದರ್ಭದಲ್ಲಿಯೂ ಸಹ ಆರೋಪಿಯು ಅದೇ ಕೆಲಸ ಮಾಡುತ್ತಿದ್ದು, ನಿಮ್ಮ ತಂದೆಯವರನ್ನು ಕೆಲಸದಿಂದ ತೆಗೆದುಹಾಕಿದ್ದರಿಂದ ಆ ದ್ವೇಷದಿಂದ ಸುಳ್ಳು ದೂರನ್ನು ಕೊಟ್ಟಿರುತ್ತೀರಿ ಎಂದರೆ ಸರಿಯಲ್ಲ. ನಿಮ್ಮ ನಿಪಿ-1 ದೂರಿನಲ್ಲಿ ನೀವು ಕೊನೆಯ ಮೂರು ಸಾಲಿನಲ್ಲಿ ಚಿಕ್ಕದಾಗಿ ಬರೆಯಾಗಿದ್ದು, ಮತ್ತೆ ಪುನಃ ಹಿಂದಿನ ಪೇಜಿನಲ್ಲಿ ಸರಿಯಾಗಿ ಬರೆಯಲಾಗಿದೆ ಎಂದರೆ ಸಾಕ್ಷಿಯು ಪುಟದ ಕೊನೆಯಲ್ಲಿ ಜಾಗ ಇಲ್ಲದ ಕಾರಣ ಅಕ್ಷರಗಳು ಸಣ್ಣದಾಗಿದ್ದು ಬಿಟ್ಟರೆ ಬೇರೆ ಯಾವುದೇ ವಿಷಯವನ್ನು ಸೇರಿಸಿದ್ದು ಇರುವುದಿಲ್ಲ ಎಂದು ನುಡಿಯುತ್ತಾರೆ. ಕುಮಾರ ಗೌಡ(ಚಾಸಾ-6) ಇವರು ನಿಮಗೆ ಎಷ್ಟು ವರ್ಷಗಳಿಂದ ಪರಿಚಯ ಎಂದರೆ ಸಾಕ್ಷಿಯು ಕೆಲವು ದಿನಗಳಿಂದ ಮುಖ ಪರಿಚಯವಿರುತ್ತದೆ ಎಂದು ನುಡಿಯುತ್ತಾರೆ. ಕುಮಾರ ಗೌಡ ಇವರ ಸಮಕ್ಷಮ ಧಮಕಿ ಹಾಕಿರುತ್ತಾರೆ ಎಂದು ನಮೂದು ಮಾಡಿದ್ದು, ಮುಂತಾದವರು ಯಾರು ಎಂದರೆ ಸಾಕ್ಷಿಯು ನ್ಯಾಯಾಲಯಕ್ಕೆ ಸಾಕ್ಷಿ ನುಡಿಯಲು ಬಂದವರು ಎಂದು ನುಡಿಯುತ್ತಾರೆ. ಅಂದರೆ ಅವರು ಯಾರು ಎಂದು ನಿರ್ದಿಷ್ಟವಾಗಿ ಗೊತ್ತಿರದ ಕಾರಣ ಮುಂತಾದವರು ಎಂದು ನಮೂದು ಮಾಡಿರುತ್ತೀರಿ ಎಂದರೆ ಸರಿ. ನಿಮ್ಮ ಮೇಲೆ ಪತ್ರಿಕೆಯವರು ವೈಯಕ್ತಿಕವಾಗಿ ನಿಮ್ಮನ್ನು ತೆಗಳಿ ನಿಮ್ಮ ವಿರುದ್ಧ ಆರೋಪಿಸಿ ಪತ್ರಿಕೆಯಲ್ಲಿ ಬರೆದಿರುತ್ತಾರೆ ಎಂದರೆ ಸರಿ. ಅದರಲ್ಲಿ ನಿಮಗೆ ಸಾಕಷ್ಟು ಅವಹೇಳನಕಾರಿಯಾಗುವಂತಹ ವಿಷಯಗಳನ್ನೂ ಸಹ ಬರೆದಿರುತ್ತಾರೆ

ಎಂದರೆ ಸರಿ. ನಿಮ್ಮ ಪ್ರಕಾರ ನಿಮ್ಮ ಮೇಲೆ ಮಾಡಿದ ಆರೋಪ ಸತ್ಯವೂ ಅಥವಾ ಸುಳ್ಳೊ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ನೀವೇನಾದರೂ ಪತ್ರಿಕೆಯವರ ಮೇಲೆ ದೂರನ್ನು ದಾಖಲಿಸಿರುತ್ತೀರಾ ಎಂದರೆ ಹೌದು ಎಂದು ನುಡಿಯುತ್ತಾರೆ. ಪ್ರಕರಣದ ಸಂಖ್ಯೆ ಯಾವುದು ಎಂದರೆ ನೆನಪಿರುವುದಿಲ್ಲ. ಸದರಿ ಪ್ರಕರಣ ಏನಾಯಿತು ಎಂದರೆ ಸಾಕ್ಷಿಯು ಮುಕ್ತಾಯವಾಗಿರುತ್ತದೆ ಎಂದು ನುಡಿಯುತ್ತಾರೆ. ನೀವು ಕೊಟ್ಟ ದೂರು ಸೂಕ್ತ ಇರುವುದಿಲ್ಲ ಎಂದು ಮುಕ್ತಾಯವಾಗಿರುತ್ತಾ ಎಂದರೆ ಹೌದು ಎಂದು ನುಡಿಯುತ್ತಾರೆ. ನೀವು ಹೇಳುವಂತಹ ಯಾವುದೇ ಘಟನೆಯು ಅಂಕೋಲಾ ನ್ಯಾಯಾಲಯದ ಆವರಣದಲ್ಲಿ ನಡೆದಿದ್ದೇ ಇರುವುದಿಲ್ಲ ಎಂದರೆ ಸರಿಯಲ್ಲ. ಹಾಗೂ ಆರೋಪಿಯು ನೀವು ಹೇಳುವಂತಹ ಸಂದರ್ಭದಲ್ಲಿ ನ್ಯಾಯಾಲಯಕ್ಕೆ ಬಂದಿದ್ದೇ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ನ್ಯಾಯಾಲಯದ ಆವರಣದಲ್ಲಿ ನಿಮ್ಮನ್ನು ಬೋಳಿ ಮಗನೇ, ನಿನ್ನನ್ನು ಕೊಲೆ ಮಾಡಿ ಹಾಕುತ್ತೇನೆ ಎಂಬ ಇತ್ಯಾದಿ ಶಬ್ದಗಳಿಂದ ಬೈದು, ಜೀವ ಬೆದರಿಕೆ ಹಾಕಿರುವುದಿಲ್ಲ ಮತ್ತು ಸಾಕ್ಷಿ ಹೇಳಲು ಬಂದ ನಿಮಗೆ ಧಮಕಿ ಹಾಕಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಯ ಹೆಂಡತಿಯ ಮೇಲೆ ಸುಳ್ಳು ದೂರನ್ನು ಕೊಟ್ಟಿದ್ದರಿಂದ ಅವರು ಪುನಃ ನಿಮ್ಮ ಮೇಲೆ ದೂರನ್ನು ಕೊಡಬಹುದು ಎಂಬ ಉದ್ದೇಶದಿಂದ ನೀವೆ ಸೃಷ್ಟಿ ಮಾಡಿಕೊಂಡು ದೂರನ್ನು ಕೊಟ್ಟಿರುತ್ತೀರಿ ಎಂದರೆ ಸರಿಯಲ್ಲ. ದೂರು ಕೊಟ್ಟ ನಂತರ ನೀವು ಅದರ ಬಗ್ಗೆ ವಿಚಾರಣೆ ಮಾಡಿರುತ್ತೀರಾ ಎಂದರೆ ಸಾಕ್ಷಿಯು ಎಸ್ ಪಿ ಇವರಿಗೆ ವಿಚಾರಣೆ ಮಾಡಿರುತ್ತೇನೆ ಎಂದು

ನುಡಿಯುತ್ತಾರೆ. ಆ ಸಂದರ್ಭದಲ್ಲಿ ಅವರು 504, 606 ಐಪಿಸಿ ಹಾಕಿರುತ್ತೇವೆ ಎಂದು ತಿಳಿರುತ್ತಾರೆ ಎಂದು ನುಡಿಯುತ್ತಾರೆ. ಯಾರಿಗೆ ಕೇಳಿರುತ್ತೀರಿ ಎಂದರೆ ಸಾಕ್ಷಿಯು ಪೊಲೀಸ್ ಠಾಣೆಯಲ್ಲಿ ಎಸ್ ಹೆಚ್ ಓ ಇವರಿಗೆ ಕೇಳಿರುತ್ತೇನೆ ಎಂದು ನುಡಿಯುತ್ತಾರೆ. ಸಾಕ್ಷಿಯು 195-ಎ ಐಪಿಸಿ ಸಹ ಬರುತ್ತದೆ ಎಂದು ಮತ್ತೆ ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ನೀವು ಕೇವಲ ಆರೋಪಿಯ ಮೇಲೆ ವೈಯಕ್ತಿಕ ದ್ವೇಷವಿರುವ ಕಾರಣ ಸುಳ್ಳು ದೂರನ್ನು ಕೊಟ್ಟಿರುತ್ತೀರಿ ಎಂದರೆ ಸರಿಯಲ್ಲ. ಈ ಮೊದಲೂ ಸಹ ನೀವು ಆರೋಪಿಯ ಹೆಂಡತಿಯ ಮೇಲೆ ಇರುವ ಪ್ರಕರಣ ಸಂಖ್ಯೆ ಸಿ ಸಿ 14/2012 ನೆದ್ದರಲ್ಲಿ ಸಾಕ್ಷಿಯನ್ನು ಹೇಳಿರುತ್ತೀರಿ ಎಂದರೆ ಸಾಕ್ಷಿಯು ಪಂಚನಾಮೆಗೆ ಸಾಕ್ಷಿ ಹೇಳಿರುತ್ತೇನೆ ಎಂದು ನುಡಿಯುತ್ತಾರೆ. ಆ ಪ್ರಕರಣವನ್ನೂ ಸಹ ತಾವು ಹಾಗೂ ಮಾಧ್ಯಮದವರು ಸೇರಿಕೊಂಡು ಮಾಡಿಸಿರುತ್ತೀರಿ ಎಂದರೆ ಸರಿಯಲ್ಲ. ಆ ಪ್ರಕರಣದಲ್ಲಿ ನಿಮಗೆ ಇನ್ಸ್‌ಪೆಕ್ಟರ್ ಇವರು ಯಾವ ಕಾರಣಕ್ಕಾಗಿ ಕಾರವಾರದಿಂದ ಕರೆಸಿದ್ದರು ಎಂದು ಕೇಳಿದ ಪ್ರಶ್ನೆಗೆ ನೀವು, ನಾನು ಅವರ್ಸಾದ ದಂಡೆಭಾದಲ್ಲಿ ನನ್ನ ಮನೆಗೆ ಬಂದಾಗ ನನ್ನ ಜೊತೆಗೆ ಇದ್ದ ಮಾಧ್ಯಮದವರಿಗೆ ಹೆರಾಯಿನ್ ಬಗ್ಗೆ ಮಾಹಿತಿ ಬಂದಿರುತ್ತದೆ ಎಂದು ಸಾಕ್ಷಿ ನುಡಿದಿದ್ದು ಅದು ಸರಿ ಇರುತ್ತಾ ಎಂದರೆ ಹೌದು ಎಂದು ನುಡಿಯುತ್ತಾರೆ. ನೀವು ಈ ಪ್ರಕರಣದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಆರೋಪಿ ಮತ್ತು ಅವರ ಕುಟುಂಬದವರ ಮೇಲೆ ಮೊದಲಿನಿಂದಲೂ ನಿಮಗೆ ದ್ವೇಷ ಇರುತ್ತದೆ ಎಂದರೆ ಸರಿಯಲ್ಲ. ಸದರಿ ದ್ವೇಷದಿಂದ

ನಿಮಗೆ ಬೇಕಾದ ವ್ಯಕ್ತಿಗಳನ್ನು ಈ ಪ್ರಕರಣದಲ್ಲಿ ಸೇರಿಸಿಕೊಂಡು ಸುಳ್ಳು ದೂರನ್ನು ಕೊಟ್ಟಿರುತ್ತೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಅಂಕೋಲಾ.